## ಮುದುಕ್ಯಾರ ಅಂಗಡಿ



ಲಿಂಗಸಗೂರಿನ ಪ್ರಮುಖ ಬೀದಿಯಲ್ಲಿರುವ ಚಹಾದ ಅಂಗಡಿಯಲ್ಲಿ ಸಂಜೆ ನನ್ನ ಗೆಳೆಯರೊಂದಿಗೆ ಬಿಸಿಬಿಸಿಯಾದ ಬೆಲ್ಲದ ಚಹಾ ಕುಡಿಯುವುದು ನಿತ್ಯದ ರೂಢಿ. ಆವತ್ತು ಎಂದಿನಂತೆ ಸಂಜೆ ಚಹಾ ಕುಡಿಯುತ್ತ, ಹರಟೆ ಹೊಡೆಯುತ್ತಾ ಕುಳಿತಿದ್ದಾಗ ಹಳ್ಳಿಯ ಹೆಂಗಸೊಬ್ಬಳು ಬಂದು, 'ಅಣ್ಣ ಇಲ್ಲಿ ಮುದುಕ್ಯಾರ ಅಂಗಡಿ ಎಲ್ಲಿ ಆದ?' ಎಂದಳು.

ತಬ್ಬಿಬ್ಬಾದ ನಾವು ಇದೇನಪ್ಪಾ ಹೊಸ ಅಂಗಡಿ ಎಂದುಕೊಂಡು ಒಬ್ಬರ ಮುಖ ಒಬ್ಬರು ನೋಡಿಕೊಂಡೆವು. ಆಕೆ, 'ಅದೇ ಕಣಣ್ಣ, ಮುದುಕ್ಯಾರ ಅಂಗಡಿ... ಸಬ್ಬು (ಸಾಬೂನು), ಹಲ್ಲು ಮಲಾಮು(ಪೇಸ್ಟ್), ಪೋಡಾರು(ಪೌಡರ್) ಇಂಥವೆಲ್ಲ ಸಿಗ್ತಾವ ನೋಡ್ರಿ' ಅಂದಳಾಕೆ. ಆಕೆ ಹುಡುಕುತ್ತಿರುವುದು ಪಕ್ಕದಲ್ಲಿರುವ ಮೋದಿಕೇರ್ ಹೆಸರಿನ ವಸ್ತು ಸಿಗುವ ಅಂಗಡಿ ಎಂಬುದು ತಿಳಿಯಿತು. ಮುಸಿಮುಸಿ ನಗುತ್ತಾ ನಾವು ಆಕೆಗೆ ದಾರಿ ತೋರಿದೆವು.

**ಗಿರೀಶ ಸೊಲ್ಲಾಪುರ**

---



## ಶಬ್ದ ರಹಿತ...

ನನಗೊಂದು ಹೊಸ ಮಿಕ್ಸರ್ ಕೊಳ್ಳಬೇಕಾಗಿತ್ತು. ಖರೀದಿಸಲು ಮಾಲ್ ಗೆ ಹೋದೆ. ತರಹೇವಾರಿ ಮಿಕ್ಸರ್ ಕಮ್ ಗ್ರೈಂಡರ್‌ಗಳನ್ನು ಅಲ್ಲಿ ಪೇರಿಸಿಟ್ಟಿದ್ದರು. 'ಶಬ್ದರಹಿತ ಮಿಕ್ಸರ್' ಎಂದು ಬರೆದ ಪೆಟ್ಟಿಗೆ ನನ್ನನ್ನು ತುಂಬಾ ಆಕರ್ಷಿಸಿತು. ಪೆಟ್ಟಿಗೆ ಬಿಚ್ಚಿಸಿ ನೋಡಿದೆ. ಮಿಕ್ಸರ್ ನೋಡಲು ಚಂದವಾಗಿತ್ತು. ಅದನ್ನೇ ಆಯ್ಕೆ ಮಾಡಿ ಹಚ್ಚಿ ತೋರಿಸುವಂತೆ ಅಂಗಡಿಯವನಿಗೆ ವಿನಂತಿಸಿದೆ. ಅದರ ಶಬ್ದವೇನೂ ಇತರ ಕಂಪನಿಗಳ ಮಿಕ್ಸರ್ ಗಿಂತ ಕಡಿಮೆ ಇರಲಿಲ್ಲ. 'ಇದೇನ್ರೀ ಶಬ್ದ ರಹಿತ ಯಂತ್ರ ಅಂತೀರಿ. ಇದೂ ಕೂಡ ಸಾಕಷ್ಟು ಶಬ್ದ ಮಾಡುತ್ತಲ್ಲ?' ಎಂದೆ. 'ಸರ್, ಆನ್ ಮಾಡಿದಾಗ ಮಾತ್ರ ಶಬ್ದ ಬರುತ್ತೆ ಸರ್' ಎನ್ನಬೇಕೇ?

**ಸುರೇಶ ಹೆಗಡೆ**